“ನಾನು ಮೊದಲನೆ ಸಾರಿ ಈ ಊರಿಗೆ ಬಂದದ್ದು” ಎಂದಾಗಲೆ ನನಗೆ ಗೊತ್ತಾಗಿದ್ದು ಇವಳು ನನ್ನ ಹಾಗೆಯೇ ಈ ಊರಿಗೆ ಹೊಸಬಳು ಎಂದು. ಸಾದಾಗಪ್ಪು ಬಣ್ಣದ, ಕೋಲುಮುಖದ ಈ ಮಹಿಳೆ ನಾನು ಕೇಳದೆಯೇ ತನ್ನ ಬಗ್ಗೆ ಹೇಳಿಕೊಂಡಳು. ಇಡೀ ದಿನ ಒಬ್ಬನೇ ಓಡಾಡಿ ದಣಿದ ನನಗೆ ಕ್ಯಾಂಪಸ್ಸಿನಲ್ಲಿ ಆದ ಈಕೆಯ ಪರಿಚಯ ನನ್ನ ಏಕಾಂಗಿತನಕ್ಕೆ ಅಲ್ಪ ವಿರಾಮ ಕೊಟ್ಟಿತ್ತು. ಒಂದೇ ಭೆಟ್ಟಿಯಲ್ಲಿ ಇಷ್ಟೊಂದು ಮುಕ್ತವಾಗಿ, ಸಂಕೋಚವಿಲ್ಲದೆ ನನ್ನ ಜೊತೆ ಅವಳು ಮಾತನಾಡಿದ್ದು ವಿಚಿತ್ರವೆನಿಸಿತು. ಮುಖ ಪರಿಚಯ ಆದಮೇಲೆ ಇಡೀ ದಿನ ನನ್ನ ಜೊತೆಗೆ ಇದ್ದು ವ್ಯಾಸಂಗದಲ್ಲಿ ಮಗ್ನಳಾದಳು. ಇಷ್ಟಾದರೂ ನಾವು ಪರಸ್ಪರ ಹೆಸರು ಹೇಳಿಕೊಂಡು ಪರಿಚಯ ಮಾಡಿಕೊಳ್ಳುವುದನ್ನೇ ಮರೆತಿದ್ದೆವು. ಎರಡು ದಿನಗಳ ಒಡನಾಟಕ್ಕೆ ಪರಿಚಯ ಯಾಕೆ? ಎಂದು ನಾನೂ ಕೇಳಲು ಹೋಗಲಿಲ್ಲ. ಎಲ್ಲಿಂದ ಬಂದಿದ್ದೇವೆ ಎನ್ನುವುದಷ್ಟೇ ಪರಸ್ಪರರಿಗೆ ಗೊತ್ತಿತ್ತು.

ಈ ಹೆಣ್ಣುಮಗಳು ನನ್ನಷ್ಟೇ ಅಂದರೆ, 35–40 ವರ್ಷದವಳಿರಬಹುದು ಎಂಬ ಅಂದಾಜು ನನ್ನದಾಗಿತ್ತು. ನಾವು ಮೈಸೂರಿನ ಮುಕ್ತ ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ವಿದ್ಯಾರ್ಥಿಗಳಾಗಿದ್ದೆವು. ಹೆಸರು ಗೊತ್ತಿಲ್ಲದ್ದರಿಂದ ಅವಳನ್ನು ಇನ್ನು ಮುಂದೆ ಸಹಪಾಠಿ ಎಂದು ಕರೆಯುತ್ತೇನೆ. ನಮ್ಮಿಬ್ಬರ ವಿಷಯ ಕನ್ನಡವಾಗಿತ್ತು. ನನ್ನ ಸಹಪಾಠಿಯ ಮಾತಿನಲ್ಲಿ ಗಾಂಭೀರ್ಯವಿತ್ತು. ನೋಟದಲ್ಲಿ ಆಕೆ ತುಳುಕಿಸುತ್ತಿದ್ದ ಪ್ರೀತಿ ವಿಶ್ವಾಸಗಳು ನನಗೆ ಅನೇಕ ಬಾರಿ ಅವಳ ಮುಕ್ತ ಸ್ವಭಾವವನ್ನು ಅನುಭವಕ್ಕೆ ತರುತ್ತಿದ್ದವು. ಕ್ಯಾಂಟೀನಿನಲ್ಲಿ, ಲೈಬ್ರರಿಯಲ್ಲಿ, ಕ್ಲಾಸಿನಲ್ಲಿ ಆಕೆ ನನ್ನ ಹತ್ತಿರ, ಹಿಂದೆ ಮುಂದೆ ಒಟ್ಟಿನಲ್ಲಿ ನನ್ನ ಕಣ್ಣಳತೆಯಲ್ಲೇ ಕೂಡುತ್ತಿದ್ದಳು. ನನ್ನ ಕಣ್ಣ ಪರಿಧಿಯನ್ನು ದಾಟಿ ಹೋಗುತ್ತಿರಲಿಲ್ಲ. ಮೊದಲನೆಯ ದಿನದ ಸಂಪರ್ಕ ಸಭೆಯಲ್ಲಿ ಕಣ್ಣು, ಮುಗುಳುನಗೆಯಿಂದಲೇ ಪರಿಚಿತಳಾಗಿದ್ದ ಅವಳು ಸಂಜೆಯಾಗುತ್ತಿದ್ದಂತೆ ಧಾರಾಳವಾಗಿ ಮಾತನಾಡಿದ್ದಳು. ತಾನು ಓದಿದ ಪಾಠಗಳು, ಬರೆದ ನೋಟ್ಸು, ಖರೀದಿಸಿದ ಪುಸ್ತಕಗಳ ಪಟ್ಟಿ ಎಲ್ಲವನ್ನು ಸವಿಸ್ತಾರವಾಗಿ ಹೇಳಿದ ಆಕೆ ನನ್ನ ಬಗ್ಗೆ ಏನೂ ಕೇಳಿರಲಿಲ್ಲ. ನಾನೂ ಹೇಳಲು ಹೋಗಿರಲಿಲ್ಲ. ಈ ಸಹಪಾಠಿಯ ಮೊದಲ ಪರಿಚಯವೂ ಅವಳ ಹಾಗೆಯೇ ತೀರಾ ಅಪರಿಚಿತವಾಗಿತ್ತು.

ನಾನಂತೂ ಎಲ್ಲ ಅರ್ಥದಲ್ಲೂ ಸಂಪೂರ್ಣ ವಿದ್ಯಾರ್ಥಿಯಾಗಿದ್ದೆ. ನನ್ನ ಓದಿನ ದಿನಗಳನ್ನು ಈ ವಯಸ್ಸಿನಲ್ಲಿ ಹುಡುಕಿಕೊಂಡು ಬಂದಿದ್ದೆ. ಅಧ್ಯಾಪಕರ ಆ ಗಾಂಭೀರ್ಯ, ಪಾಂಡಿತ್ಯದ ಅಬ್ಬರ ನನ್ನಲ್ಲಿ ಅವರ ಬಗ್ಗೆ ಭಯ, ಗೌರವಗಳನ್ನು ಹುಟ್ಟಿಸಿದ್ದವು. ನಾನು ಬರೆದು ತಂದ ಪಾಠಗಳ ತಪಾಸಣೆ, ನನ್ನ ನಂಬರಿನ ನೋಂದಣಿ, ಹಣಕಟ್ಟುವುದು, ನನಗೆ ಬರಬೇಕಾದ ಪತ್ರ ಪಾಠಗಳ ವಿಚಾರಣೆ ಇದರಲ್ಲಿಯೇ ಮುಳುಗಿದ್ದ ನಾನು ಹೋದಲೆಲ್ಲ ನನ್ನ ಹಿಂದೆಯೇ ನನ್ನ ಈ ಸಹಪಾಠಿ ಇರುತ್ತಿದ್ದಳು. ನಾನು ಮುಗುಳುನಕ್ಕು, ‘ನೀವೂ ಇಲ್ಲೇ ಇದ್ದೀರಾ’ ಎನ್ನುತ್ತಿದ್ದೆ. ಅವಳು ಹೌದು ಎಂಬಂತೆ ಗೋಣು ಹಾಕುತ್ತಿದ್ದಳು.

ಸಂಜೆ ಪಾಠಗಳೆಲ್ಲ ಮುಗಿದಾಗ ನಾನು ಪುಸ್ತಕದ ಅಂಗಡಿಗೆ ಹೋಗಿ ಪುಸ್ತಕಗಳನ್ನು ಕೊಂಡು ಒಂದಿಷ್ಟು ಪೇಟೆಯಲ್ಲಿ ಸುತ್ತಾಡಿ ರೂಮಿಗೆ ಹೊರಡಬೇಕೆಂದು ನಿಶ್ಚಯಿಸಿ ಬಸ್ಸಿಗಾಗಿ ಕಾಯುತ್ತ ನಿಂತಾಗ ಸಹಪಾಠಿ ಧಾವಿಸಿ ಬಂದಳು.

“ನೀವು ಇಲ್ಲಿ ಇದ್ದೀರಿ. ನಾನು ಆಕಡೆಯಲ್ಲಾ ನಿಮ್ಮನ್ನ ಹುಡುಕಾಡಿದೆ...’’

ನಾನು ನಗುತ್ತ, “ನನ್ನ ಕೆಲಸ ಮುಗಿಯಿತು ಬಂದು ಬಿಟ್ಟೆ...” ಎಂದು ಹೇಳಿದಾಗ ಆಕೆ ಅಸಮಾಧಾನದ ನೋಟ ಬೀರಿದಳು. ಬಸ್ಸೊಂದು ಜನರನ್ನು ತುಂಬಿಕೊಂಡು ನಮ್ಮ ಸ್ಟಾಪಿನಲ್ಲಿ ನಿಲ್ಲದೇ ಹಾದು ಹೋಯಿತು. ಇನ್ನೊಂದು ಬಸ್ಸಿಗಾಗಿ ಕಾಯುವುದು ಅನಿವಾರ್ಯವಾಯಿತು.

“ಬನ್ನಿ, ಬಸ್ಸು ಬರಲು ಇನ್ನೂ ಅರ್ಧಗಂಟೆ ಇದೆ; ಕೂಡೋಣ’’ ಎಂದಳು. ನಾನು ಅನ್ಯಮನಸ್ಕನಾಗಿ